# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **507** |
| **ಸದಸ್ಯರ ಹೆಸರು** | : | **ಶ್ರೀ ಶರವಣ ಟಿ.ಎ. (ವಿಧಾನ ಸಭೆಯಯಿಂದ ಚುನಾಯಿತರಾದವರು)** |
| **ಉತ್ತರಿಸ ಬೇಕಾದ ದಿನಾಂಕ** | : | **12.12.2024** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿ** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಹೊರ ವಲಯದಲ್ಲಿ ಉದ್ದೇಶಿತ PRR ರಸ್ತೆಯನ್ನು ನಿರ್ಮಾಣ ಮಾಡಲು ಎಷ್ಟು ಎಕರೆ ಜಮೀನು ಬೇಕಾಗುತ್ತದೆ; ಎಷ್ಟು ಹಳ್ಳಿಗಳಲ್ಲಿ ರಸ್ತೆ ಹಾದು ಹೋಗುತ್ತದೆ. | ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ) ಯೋಜನೆಗಾಗಿ ಒಟ್ಟು 2558 ಎಕರೆ 24.08 ಗುಂಟೆ ವಿಸ್ತೀರ್ಣದ ಜಮೀನು ಅಗತ್ಯವಿದೆ. ಈ ಯೋಜನೆಯು 77 ಗ್ರಾಮಗಳಲ್ಲಿ ಹಾದು ಹೋಗುತ್ತದೆ. |
| ಆ) | ಭೂ ಸ್ವಾಧೀನ ಪ್ರಕ್ರಿಯೆ ಯಾವಾಗಿನಿಂದ ಪ್ರಾರಂಭವಾಗಿದೆ; ಸಂತ್ರಸ್ತರಿಗೆ ಪರಿಹಾರವನ್ನು ಯಾವ ಮಾನದಂಡಗಳ ಮೇಲೆ ನಿಗದಿ ಪಡಿಸಿದೆ; | • ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಫೆರಿಫೆರಲ್ ರಿಂಗ್ ರಸ್ತೆ) ಯೋಜನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆಯು 2005 ನೇ ಸಾಲಿನಿಂದ ಪ್ರಾರಂಭವಾಗಿದೆ.<br>• ಗ್ರಾಮವಾರು ಜಮೀನುಗಳ ಮಾರ್ಗಸೂಚಿ ದರವನ್ನು ಗಮನದಲ್ಲಿರಿಸಿಕೊಂಡು ರೈತರೊಂದಿಗೆ ಸಂಧಾನ ಮಾಡುವುದರ ಮೂಲಕ ಭೂಸ್ವಾಧೀನ ಕಾಯ್ದೆ, 1894 ರಡಿ ನಿಗದಿಪಡಿಸಬಹುದಾದ ಮೊತ್ತಕ್ಕಿಂತ ಹೆಚ್ಚಿನ ಭೂಪರಿಹಾರ ನೀಡಲು ಅಥವಾ ಟಿ.ಡಿ.ಆರ್. ನೀಡಲು ನಿರ್ಧರಿಸಲಾಗಿದೆ. |
| ಇ) | ಸಂತ್ರಸ್ಥರಿಗೆ 1894 ಕಾಯ್ದೆಯಡಿ ಭೂ ಪರಿಹಾರ ನೀಡಲು ಉದ್ದೇಶಿಸಲಾಗಿದೆಯೇ: ಸಂತ್ರಸ್ಥರಿಗೆ ಇದರಿಂದ ಆಗುವ ಸಾಧಕ-ಭಾದಕಗಳೇನು; | ಗ್ರಾಮವಾರು ಜಮೀನುಗಳ ಮಾರ್ಗಸೂಚಿ ದರವನ್ನು ಗಮನದಲ್ಲಿರಿಸಿಕೊಂಡು ರೈತರೊಂದಿಗೆ ಸಂಧಾನ ಮಾಡುವುದರ ಮೂಲಕ ಭೂಸ್ವಾಧೀನ ಕಾಯ್ದೆ, 1894 ರಡಿ ನಿಗದಿಪಡಿಸಬಹುದಾದ ಮೊತ್ತಕ್ಕಿಂತ ಹೆಚ್ಚಿನ ಭೂಪರಿಹಾರ ನೀಡಲು ಅಥವಾ ಟಿ.ಡಿ.ಆರ್. ನೀಡಲು ನಿರ್ಧರಿಸಲಾಗಿದೆ. ಇದರಿಂದಾಗಿ ಸಂತ್ರಸ್ಥರಿಗೆ ಯಾವುದೇ ಭಾದಕವಾಗುವುದಿಲ್ಲ. |
| ಈ) | ಕಳೆದ ಎರಡು ವರ್ಷಗಳಲ್ಲಿ ಈ ರಸ್ತೆ ಹಾದುಹೋಗುವ ಗ್ರಾಮಗಳ ಸ್ಥಿರಾಸ್ತಿ ಮಾರ್ಗ ಸೂಚಿ ದರಗಳ ವಿವರಗಳನ್ನು ಕಡಿಮೆ ಮಾಡಲಾಗಿದೆಯೇ; ಕಡಿಮೆ ಮಾಡಿರುವುದಕ್ಕೆ ಕಾರಣಗಳೇನು? | ಇಲ್ಲ. |

ಸಂಖ್ಯೆ: ನಅಇ 281 ಬೆಂಭೂಸ್ವಾ 2024

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ